(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ತಾವು ತಮ್ಮದೇ ಬೇರೆ ಬಿಲ್ ಮಂಡನೆ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ಸಹಕಾರಿ ಬಿಲ್ ಅನ್ನು ಮಂಜೂರು ಮಾಡಬೇಕೆಂದರೆ ಬಹುಶಃ ನನಗನ್ನಿಸುತ್ತದೆ, ಅದು ಇವತ್ತು ಮುಗಿಯುವುದಿಲ್ಲ.

ಅಧ್ಯಕ್ಷರು: ನೀವು ಸಹಕಾರ ಕೊಟ್ಟರೆ ಇವತ್ತೇ ಮುಗಿಯುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ಅವರು ಸಹಕಾರ ಕೊಟ್ಟರೆ ಮುಗಿಸುತ್ತೇನೆ. ತಾವು ಮಂಡಿಸಿ. ನಾನು ಕೆಲವು ಭಾಗಗಳನ್ನು ಹೇಳುತ್ತೇನೆ. ಅದಕ್ಕೆ ತಾವು ಒಪ್ಪಿದರೆ, ನಾನು ಒಪ್ಪುತ್ತೇನೆ. ಇದ್ದ ಸ್ಥಿತಿಯಲ್ಲೇ ಮಾಡಬೇಕೆಂದರೆ, ನಿನ್ನೆ ಧರಣಿ ಎಂದು ಬಂತು, ಆ ಮಟ್ಟಕ್ಕೆ ಹೋಗುತ್ತದೆ.

ಅಧ್ಯಕ್ಷರು: ಕೊನೆ ದಿವಸ ಆ ಸಂದರ್ಭ ಮಾಡಬೇಡಿ ಇವತ್ತು.

ಶ್ರೀ ಎಸ್.ಎಸ್. ಪಾಟೀಲ್: ಅದೆಲ್ಲಾ ಒಪ್ಪಿಕೊಂಡರೆ ನಾನು ಮುಗಿಸುತ್ತೇನೆ. ಕೆಲವು ಅವಶ್ಯವಿದೆ. ಅದನ್ನು ನಾನು ಹೇಳುತ್ತೇನೆ. ತಾವೂ ಹೇಳಿ. ಅದನ್ನು ಒಪ್ಪಿದರೆ ಮುಗಿಸೋಣ. ಚರ್ಚೆಯಾಗಬೇಕು, ಆ್ಯಸ್ ಇಟೀಜ್ ಬಿಲ್ ಮಂಜೂರಾಗಬೇಕೆಂದರೆ, ಅದು ಇವತ್ತು ಮುಗಿಯುವುದಿಲ್ಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ ಕಾಗೇರಿ: ಸೌಹಾರ್ದಯುತವಾಗಿ ಮುಗಿಯಬೇಕಾದರೆ ಆ ಬಿಲ್ ಇವತ್ತು ಬರಬಾರದು.

ಅಧ್ಯಕ್ಷರು: ಹಾಗಾದರೆ, ಹೇಗೆ ಮುಗಿಯುತ್ತದೆ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ಇಲ್ಲವೆಂದರೆ, ಸೋಮವಾರಕ್ಕೆ ಮುಂದಕ್ಕೆ ಹಾಕಬೇಕಾಗುತ್ತದೆ.

ಅಧ್ಯಕ್ಷರು: ಇಲ್ಲ. ಸೋಮವಾರಕ್ಕೆ ಏಕೆ? ರೇವಣ್ಣನವರೆ, ತಾವು ಮುಂದುವರೆಸಿ. ಆಮೇಲೆ ನೋಡೋಣ. ಅಷ್ಟರಲ್ಲಿ ಅವರು ಮನಸ್ಸು ಛೇಂಜ್ ಮಾಡಿಕೊಳ್ಳುತ್ತಾರೆ.

(iv) ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಅರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಮೂಲಭೂತ ಸೌಲಭ್ಯ ಹಾಗೂ ನಾಗರೀಕ ವಿಮಾನಯಾನ ಸಚಿವರು) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಅರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಎಂ. ರೇವಣ್ಣ: ಹುಬ್ಬಳ್ಳಿಯಲ್ಲಿನ ಮಹದೇವ ಬಟ್ಟೆ ಗಿರಣಿ 100 ವರ್ಷಗಳ ಹಿಂದೆ ಬ್ರಿಟೀಷರು ಮತ್ತು ಅಲ್ಲಿಯ ಖಾಸಗಿ ಸಂಸ್ಥೆಗಳಿಂದ ಪ್ರಾರಂಭವಾಗಿ ಆ ಒಂದು ಸಂಸ್ಥೆ ಇಂದು ಬಹಳಷ್ಟು ನಷ್ಟವನ್ನು ಅನುಭವಿಸಿ, ಅದನ್ನು ಬಿಐಎಫ್ಆರ್ ಮುಂದೆ ತಂದು ಆ ಜಮೀನನ್ನು ಪರಭಾರೆ ಮಾಡುವ ಸಂದರ್ಭದಲ್ಲಿ ಒಬ್ಬರು ಸುಶೀಲ ಎನ್ನುವವರು ಭೂ ಒಡೆತನದ ಬಗ್ಗೆ ಹೈಕೋರ್ಟಿಗೆ ಹೋಗಿ ಪ್ರಶ್ನಿಸಿದ ಬಗ್ಗೆ ಆ ಜಮೀನು ಯಾರ ಒಡೆತನದಲ್ಲಿದೆ ಎನ್ನುವ ಸ್ಪಷ್ಟೀಕರಣ ಬೇಕೆಂಬ ನಿರ್ದೇಶನ ಬಂದಿರುವುದರಿಂದ, ಈ ಹಿಂದೆ ಈ ಜಮೀನು ಒಟ್ಟು ಇರುವ 51 ಎಕರೆಯಲ್ಲಿ ಸರ್ಕಾರದ 17 ಎಕರೆ, 21 ಎಕರೆ 33 ಗುಂಟೆ ಖಾಸಗಿಯವರದ್ದು ಮತ್ತು 12.21 ಗುಂಟೆ ಎನ್ಕ್ರೋಚ್ ಆಗಿರುವುದಿದೆ. ಒಟ್ಟು ಇದ್ದ ಜಮೀನಿನಲ್ಲಿ ಆ ಜಮೀನನ್ನು ಲೆಸ್ಸಿ ಮತ್ತು ಲೆಸ್ಸರ್, ಸರ್ಕಾರದ ಒಡೆತನ ತೋರಿಸಬೇಕೆಂಬ ಕೋರ್ಟ್ನ ತೀರ್ಮಾನ ಬಂದಿರುವುದರಿಂದ, ಅವರ ಒಡೆತನಕ್ಕೋಸ್ಕರ ಈ ತಿದ್ದುಪಡಿ ತರಲಾಗಿದೆ.

†**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):** ಈ ಒಂದು ಬಿಲ್ ಇಡೀ ರಾಜ್ಯದಲ್ಲಿ ಬೇರೆ ಯಾವುದೇ ಮಿಲ್‌ಗೆ, ಬೇರೆ ಯಾವುದಕ್ಕೂ ಅಲ್ಲದೆ, ಕೇವಲ ಮಹದೇವ ಟೆಕ್ಸ್‌ಟೈಲ್ ಮಿಲ್ ಏನು ಹುಬ್ಬಳ್ಳಿಯಲ್ಲಿದೆ ಅದಕ್ಕೆ ಸೀಮಿತವಾಗಿ ತಂದಂಥ ಬಿಲ್ ಎಂದು ನಾನು ಪರಿಗಣನೆ ಮಾಡಿದ್ದೇನೆ. ಹೈಕೋರ್ಟಿನಲ್ಲಿ ಅವರ್ಯಾರು ಇದಕ್ಕೆ ಸಂಬಂಧಪಟ್ಟ ಲ್ಯಾಂಡ್ ಓನರ್ಸ್ ರಿಟ್ ಪಿಟಿಷನ್ ಹಾಕಿದ್ದಾರೆ. ಅದರ ಬಗೆಗಿನ ವಿವರಗಳನ್ನು ಕೊಡಬೇಕಾಗಿದೆ. ಏಕೆಂದರೆ, ಹೈಕೋರ್ಟಿಗೆ ಹೋಗಿದ್ದ ಬಗ್ಗೆ ನನಗೆ ಮಾಹಿತಿ ಇದೆ. ಆದರೆ, ಯಾವ ಕಾರಣದ ಸಲುವಾಗಿ ಅವರು ಹೈಕೋರ್ಟಿಗೆ ಹೋಗಿದ್ದರು, ಅವರೇನು ಕ್ಲೇಂ ಮಾಡಿದ್ದಾರೆ? ನಮ್ಮ ರಾಜ್ಯ ಸರ್ಕಾರದ ಪರವಾಗಿ ಯಾವ ರೀತಿ ವಾದವನ್ನು ಮಾಡಿದರು? ಅಂತಿಮವಾಗಿ ತೀರ್ಮಾನವೇನಾಯಿತು? ಏಕೆಂದರೆ ನನಗೆ ಬಂದ ಮಾಹಿತಿ ಪ್ರಕಾರ ಸರ್ಕಾರದ ಪರವಾಗಿ ಇದ್ದ ವಕೀಲರು ಅಥವಾ ಸರ್ಕಾರದ ಅಧಿಕಾರಿಗಳು ಸರಿಯಾದ ಮಾಹಿತಿಗಳನ್ನು ಹೈಕೋರ್ಟಿಗೆ ಕೊಟ್ಟಿಲ್ಲ. ಎಲ್ಲಿಯವರೆಗೆ ಎಂದರೆ, ಅಲ್ಲಿ ಸರಿಯಾಗಿ ವಾದ ಮಂಡನೆಯಾಗಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮುಂದು....

ಹೀಗಾಗಿ ಇವತ್ತು ಈ ಜಮೀನು ಸರ್ಕಾರದ ಹಿಡಿತದಿಂದ ಕೈ ತಪ್ಪಿ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ಸರಿಯಾದಂಥ ತೀರ್ಮಾನ ಬಂದಿಲ್ಲ ಅನ್ನುವಂಥ ಮಾಹಿತಿ ಇವತ್ತು ನಮಗೆ ಬಂದಿದೆ. ಹೀಗಾಗಿ ಇವತ್ತು ಹೈಕೋರ್ಟಿನಲ್ಲಿ ಇದರ ಬಗ್ಗೆ ಏನಾಗಿದೆ? ರಿಟ್ ಪಿಟಿಷನ್ ಇವೆಲ್ಲವೆನ್ನೂ ಮೆನ್ಷನ್ ಮಾಡಿದ್ದಾರೆ, ಹೀಗಾಗಿ ನಿಜವಾಗಿ ಅಲ್ಲಿ ಏನು ತೀರ್ಮಾನವಾಗಿದೆ?

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಸರ್ಕಾರದ ಕಡೆಯಿಂದ ವಾದ ಸರಿಯಾಗಿ ಮಂಡನೆ ಆಗಿದೆಯೋ ಇಲ್ಲವೋ? ಇದೆಲ್ಲವೂ ಬೇಕಾಗಿದೆ. ಏಕೆಂದರೆ, ಸರ್ಕಾರದ ಕಡೆಯಿಂದ ಲೋಪದೋಷಗಳು ಇದ್ದಾಗ್ಯೂ ಅಲ್ಲಿ ಯಾರು ಸುಶೀಲಮ್ಮ, ಅವರು ಏನು ಕೋರ್ಟಿಗೆ ಹೋಗಿದ್ದಾರೆ, ಅವರ ಪರವಾಗಿ ತೀರ್ಮಾನವಾಗಲಿಕ್ಕೆ ಸಾಧ್ಯ. ಸರ್ಕಾರದ ಕಡೆಯಿಂದ ಲೋಪದೋಷಗಳು ಇದ್ದಾಗ, ಸರಿಯಾದಂಥ ಮಾಹಿತಿ ಕೊಡದೇ ಇದ್ದಾಗ. ಅದು ಆ ರೀತಿ ಆಗಿದೆ ಎನ್ನುವುದು ಒಂದು ಅದರ ಬಗ್ಗೆ ಸೃಷ್ಟೀಕರಣ ಮಾಡಬೇಕು ಎಂದು ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಇನ್ನೊಂದು ಇದು ಬಹಳ ಹಳೆಯದು, ಮಹಾದೇವ್ ಟೆಕ್ಸ್‌ಟೈಲ್ ಮಿಲ್ಸ್ ಬಹಳ ಹಳೆಯದಾದ ಮಿಲ್, ಇದಕ್ಕೊಂದು ಇತಿಹಾಸವೇ ಇದೆ, ಆದರೆ ಅದು ಮುಚ್ಚಿ ಹೋಯಿತು ಅಲ್ಲಿ ನೌಕರರು, ಕಾರ್ಮಿಕರು, ಸಾಕಷ್ಟು ಹೋರಾಟ ಮಾಡಿದರು, ಅವರಿಗೆ ಪರಿಹಾರ ಕೊಡಬೇಕೆಂದು ನಾವೂ ಕೂಡ ಒಂದು ಹಂತದಲ್ಲಿ ಒತ್ತಾಯ ಮಾಡಿದೆವು. ಆಗ ಮಾನ್ಯ ರೇವಣ್ಣನವರು ನಾವು ಕುಳಿತು ಕೆಲವೊಂದು ಸಮಾಲೋಚನೆ ಮಾಡಿ, ಅಲ್ಲಿ ಪರಿಹಾರ ಕೊಡುವಂಥದ್ದು ಆಯಿತು. ಅದು ಒಂದು ಹಂತಕ್ಕೆ ಮುಗಿಯುತ್ತಾ ಬಂತು. ಆದರೆ ಆ ಒಂದು ಭೂಮಿ ಏನು ಇದೆ ಅದು ಸರಿಯಾಗಿ ಉಪಯೋಗವಾಗಬೇಕು ಎನ್ನುವ ಕಳಕಳಿ ನನ್ನದೂ ಇದೆ. ಏಕೆಂದರೆ ಹಾರ್ಟ್ ಆಫ್ ದಿ ಸಿಟಿ ಅದು. ಕೋಟ್ಯಾಂತರ ರೂಪಾಯಿನ ಕಿಮಿತ್ತಿನ ಪ್ರಾಪರ್ಟಿ ಅದು. ಅದು ಹುಬ್ಬಳ್ಳಿಯಲ್ಲಿ ಇದೆ, ಹೀಗಿರುವಾಗ, ಅದಕ್ಕೆ ಬಹಳ ವ್ಯಾಲ್ಯೂ ಇದೆ, ಆದ್ದರಿಂದ, "ಮಿನಿ ವಿಧಾನಸೌಧ" ಹುಬ್ಬಳ್ಳಿಯಲ್ಲಿ ಇಲ್ಲ, ಬೇರೆ ಕಡೆ ಎಲ್ಲಾ ಕಡೆ ಸಣ್ಣ ಸಣ್ಣ ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ಆದವು. ನಾನು ಮಾನ್ಯ ಶ್ರೀಕಂಠಯ್ಯನವರಿಗೆ ಸಾಕಷ್ಟು ಸಲ ಹೇಳಿದೆ, ಒಂದು ಮಿನಿ ವಿಧಾನ ಸೌಧ ಹುಬ್ಬಳ್ಳಿಯಲ್ಲಿ ಮಾಡಿ ಎಲ್ಲಾ ಸರ್ಕಾರಿ ಕಛೇರಿಗಳನ್ನು ಒಂದು ಕಡೆ ತೆಗೆದುಕೊಂಡು ಬನ್ನಿ ಎಂದು ಹೇಳಿದೆ. ಅಲ್ಲಿ ಮಹಾದೇವ್ ಟೆಕ್ಸ್ ಟೈಲ್ಸ್ ಇರುವಂಥ ಜಾಗ ಅದು ಬಹಳ ಸೂಕ್ತ ಇದೆ ಎನ್ನುವಂಥದ್ದೂ ಹೇಳಿದೆ. ಆದರು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿಲ್ಲ. ಡಿಸಿಯವರಿಗೂ ಕೂಡ ಹೇಳಿದೆ. ಆದರೆ ಅದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಹೀಗಾಗಿ ಆ ಜಾಗ ನಾಳೆ ಯಾರದೋ ಪಾಲು ಆಗುವ ಪರಿಸ್ಥಿತಿ ಇದೆ, ಅದು ಆಗಬಾರದು ಎನ್ನುವುದು ಮುಖ್ಯ ಉದ್ದೇಶ. ಮತ್ತೊಂದು ಅಂಶ ಏನೆಂದರೆ, ಮಾನ್ಯ ಸಚಿವರು ಒಂದು ಮಾತು ಹೇಳಿದರು. ಈ ಹನ್ನೆರಡು ಎಕರೆ ಅದು ಏನ್‌ಕ್ರೋಚ್ ಆಗಿದೆ ಎಂದರು. ಅದು ಏನ್‌ಕ್ರೋಚ್ ಆಗಿದೆ, ಅದು ಇವತ್ತಿನ ಏನ್‌ಕ್ರೋಚ್ ಅಲ್ಲ. ಇವತ್ತಿನ ಖಿಲ್ಲಾ ಜಾಗ ಏನು ಮೈದಾನದ ಸಲುವಾಗಿ ಉಪಯೋಗ ಮಾಡುತ್ತಾರಲ್ಲಾ ಅದನ್ನು ನೀವು ರಕ್ಷಣೆ ಮಾಡಿ, ಅದು ಇನ್ನೂ ಏನ್‌ಕ್ರೋಚ್ ಆಗಿಲ್ಲ, ಒಂದು ಸುದೈವ, ಅದನ್ನು ಮೊದಲು ರಕ್ಷಣೆ ಮಾಡುವಂಥದ್ದು ಆಗಬೇಕು. ಆದರೆ ಹನ್ನೆರಡು ಎಕರೆ ಏನು ಇದೆ, ಅಲ್ಲಿ ದಲಿತ ಜನಾಂಗದವರು, ಬಡವರು, ರೀನ ದಲಿತರು, ಆ ಹನ್ನೆರಡು ಎಕರೆ ಜಾಗದಲ್ಲಿ ವಾಸವಾಗಿದ್ದಾರೆ. ಇದು ಸುಮಾರು 70 ವರ್ಷಗಳ ಹಿಂದಿನಿಂದಲೂ ಅವರು ಗುಡಿಸಲುಗಳನ್ನು ಹಾಕಿಕೊಂಡು, ಮನೆಗಳನ್ನು ಕಟ್ಟಿಕೊಂಡು, ವಾಸ ಮಾಡುತ್ತಿದ್ದಾರೆ, ಅದಕ್ಕೆ ಇವತ್ತಿಗೂ ಏನು ಎನ್ನುತ್ತಾರೆಂದರೆ, ಯಾವ ಮಹಾದೇವ್ ಟೆಕ್ಸ್‌ಟೈಲ್ಸ್ ಇದೆ, ಗಿರಣಿ ಮಿಲ್ ಇದೆ ಅದಕ್ಕೆ ಗಿರಿಣಿ ಚಾಳ್ ಎಂದು ಕರೆಯುತ್ತಾರೆ. ಹುಬ್ಬಳ್ಳಿಯಲ್ಲಿ ಗಿರಿಣಿ ಚಾಳ್ ಎಂದರೆ ಬಹಳ ಹಳೆಯದು ಎಂದು ಹೇಳುತ್ತಾರೆ. ಅಷ್ಟೊಂದು ಅದಕ್ಕೆ ಹೆಸರು ಇದೆ. ಹೀಗಾಗಿ ಆ ಗಿರಿಣಿ ಚಾಳ್‌ನಲ್ಲಿ ಏನು ಹನ್ನೆರಡು ಎಕರೆ ಜಮೀನು ಇದೆ ಅದರಲ್ಲಿ ವಾಸವಾಗಿರುವವರು, ಇವತ್ತು ನಿನ್ನೆ ಆ ಜಾಗವನ್ನು ಏನ್‌ಕ್ರೋಚ್ ಮಾಡಿದ್ದು ಅಲ್ಲ.

ಅದು ಸುಮಾರು 70 ವರ್ಷಗಳಿಂದ, ಗುಡಿಸಲುಗಳನ್ನು, ಮನೆಗಳನ್ನು, ಕಟ್ಟಿಸಿ ಕೊಂಡು ದೀನದಲಿತರು ಇದ್ದಂಥವರು ಅಲ್ಲಿಯೇ ವಾಸ ಮಾಡುತ್ತಿದ್ದಾರೆ. ಹೀಗಾಗಿ ಆ ಗಿರಿಣಿ ಚಾಳ್‌ನಲ್ಲಿ ಹನ್ನೆರಡು ಎಕರೆಯಲ್ಲಿ ಏನು ವಾಸವಾಗಿದ್ದರೆ, ಅವರಿಗೆ ಇನ್ನುವರೆವಿಗೂ ಪಟ್ಟಾ ಸಿಕ್ಕಿಲ್ಲ. ಮಾನ್ಯ ರೇವಣ್ಣನವರೇ, ನಾವು ಇದರ ಬಗ್ಗೆ ಚರ್ಚೆ ಮಾಡಿದೆವು. ಆ ಹನ್ನೆರಡು ಎಕರೆಯಲ್ಲಿ ಇದ್ದಂಥ ಗಿರಿಣಿ ಚಾಳ್‌ದ ಜನರಿಗೆ ಇನ್ನುವರೆವಿಗೂ ಪಟ್ಟಾ ಸಿಕ್ಕಿಲ್ಲ. ಇವತ್ತು ನಿಮ್ಮ ಸರ್ಕಾರ ದೀನ ದಲಿತರ ಪರವಾಗಿ ಇದ್ದೇವೆ, ನಾವು ಅವರ ರಕ್ಷಣೆ ಮಾಡುತ್ತೇವೆಂದು ಹೇಳುತ್ತಿದೆ. ಆದರೆ ಇನ್ನುವರೆವಿಗೂ ಅವರಿಗೆ ನೀವು ಹಕ್ಕುಪತ್ರ ಕೊಡಲಿಕ್ಕೆ ಆಗಿಲ್ಲ. 70 ವರ್ಷಗಳಿಂದ ವಾಸವಾಗಿದ್ದಾರೆ, ಇನ್ನುವರೆವಿಗೂ ಹಕ್ಕುಪತ್ರ ಕೊಡಲಿಕ್ಕೆ ಆಗಿಲ್ಲ. ಅದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಆ ಗಿರಿಣಿ ಚಾಳದ ಎಲ್ಲಾ ವಾಸಿಗರಿಗೆ ಆ ದೀನ ದಲಿತರಿಗೆ ನೀವು ಪಟ್ಟಾ ಕೊಡುವುದು, ಹಕ್ಕು ಪತ್ರ ಕೊಡುವುದು, ತಕ್ಷಣವೇ ಆಗಬೇಕು. ಅದರ ಜೊತೆಗೆ ಇದರ ಬಗ್ಗೆಯೂ ನೀವು ವಿಚಾರ ಮಾಡಿಕೊಂಡು, ತಕ್ಷಣವೇ ನಿರ್ಣಯ ಕೈಗೊಂಡು ಅವರಿಗೆ ಹಕ್ಕುಪತ್ರ ಕೊಡುವುದು ಎಂದಾದರೆ ಒಳ್ಳೆಯದು, ಈ ಹನ್ನೆರಡು ಎಕರೆ ಬಗ್ಗೆ ಅವರಿಗೆ ತೆರವು ಮಾಡುವುದು, ಹಿಂದೆ ಅಲ್ಲಿದ್ದಂಥ ನಿಮ್ಮ ಡಿವಿಜಿನಲ್ ಕಮೀಷನರ್ ಅವರು ಅಲ್ಲಿಗೆ ತೆರವು ಮಾಡಲಿಕ್ಕೆ ಬಂದಿದ್ದರು. ಅವರುಗಳನ್ನು ಹಾಗೂ ಆ ಗುಡಿಸಲು, ಮನೆಗಳನ್ನು, ಕಿತ್ತು ಹಾಕಿ ಡೆಮಾಲಿಷ್ ಮಾಡಿ ಅವರನ್ನು ಹೊರಗೆ ಹಾಕಲಿಕ್ಕೆ ಪ್ರಯತ್ನಿಸಿದ್ದರು. ಆಗ ನಾವು ಎಲ್ಲಾ ಪ್ರೊಟೆಸ್ಟ್ ಮಾಡಿದೆವು, ಹೀಗಾಗಿ ಅದು ಹಾಗೆಯೇ ಅಲ್ಲಿ ಉಳಿದು ಕೊಂಡಿತು. ಅವರು ಅಲ್ಲಿಯೇ ಉಳಿದುಕೊಂಡಿರು, ಹೀಗಾಗಿ ಅವರಿಗೆ ಇವತ್ತಿನವರೆಗೂ ಯಾವುದೇ ಸೆಕ್ಯೂರಿಟಿ ಇಲ್ಲ. ಹೀಗಾಗಿ ಅವರಿಗೆ ಸೆಕ್ಯೂರಿಟಿ ಕೊಡುವುದು ಆಗಬೇಕು, ಮತ್ತು ಹನ್ನೆರಡು ಎಕರೆಯಲ್ಲಿ ಇರುವಂಥವರನ್ನು ಬಿಡಿಸುವುದಿಲ್ಲ ಎನ್ನುವಂಥ ಸ್ಪಷ್ಟವಾದ ಭರವಸೆ ಬೇಕು, ಅವರಿಗೆ ಹಕ್ಕುಪತ್ರ ಕೊಡುವಂಥದ್ದು ಆಗಬೇಕು. ಹೀಗಾಗಿ ಇದರ ಬಗ್ಗೆ ಸ್ಪಷ್ಟೀಕರಣ ಮಾನ್ಯ ಮಂತ್ರಿಗಳು ಕೊಟ್ಟು, ಈ ಒಂದು ಜಮೀನು ಸರ್ಕಾರದ ಸ್ವಾಧೀನದಲ್ಲಿಯೇ ಉಳಿಯುವ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತಿರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ತಂದಂಥ ಬಿಲ್ ಬಹಳ ಯೋಗ್ಯವಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ನಮ್ಮ ವಿರೋಧ ಪಕ್ಷದ ನಾಯಕರೇ ಹೇಳಿದ ಹಾಗೆ ಅದು ನಿಜವಾಗಿ ನಾವು ನಾಳೆ ಪ್ರಸಂಗ ಬಂದರೆ ಈ ಬೆಂಗಳೂರು ಮಾಧರಿಯಲ್ಲಿಯೇ ಹುಬ್ಬಳ್ಳಿ ಬೆಳೆಯಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಆ ಜಾಗವನ್ನು ಉಳಿಸಿಕೊಳ್ಳಬೇಕಾಗುತ್ತದೆ. ನಂತರ ಅವರು ಏನು ಹೇಳಿದರು, ಆ ಹನ್ನೆರಡು ಎಕರೆಯಲ್ಲಿ ಯಾರೋ ಕೆಲವರು ಇದ್ದಾರೆಂದು, ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಬಿಲ್ಡಿಂಗ್ ಒಡೆಯುತ್ತಾರೆ. ಅವರನ್ನು ಬಿಡಿಸಿದರೂ ಕೂಡ ಬೇರೆ ಜಾಗ ಮಾಡಿಕೊಡಿ. ಅವರಿಗೆ ಜಾಗ ಕೊಟ್ಟು ಅದನ್ನು ಬಿಡಿಸಿ ಆ ಜಾಗ ತೆಗೆದುಕೊಳ್ಳುವುದು ಯೋಗ್ಯ ಇದೆ. ನನ್ನ ಕೇಳಿದರೆ ಅದು ಸರ್ಕಾರಕ್ಕೆ ಬರಬೇಕು. ಕಾರ್ಪೊರೇಷನ್‌ಗೆ ಹೋಗಬೇಕು... ಅದು ಅವರಿಗೆ ಬೇರೆ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ನೀವು ಹೇಳುವುದು ಕರೆಕ್ಟ್ ನನ್ನ ಅಭಿಪ್ರಾಯ ಏನೆಂದರೆ, ಅದು ಬಹಳ ಹಳೆಯದು ಇದೆ, ಇದು ಡಿವಿಯೇಷನ್ ಆಗುವುದು ಬೇಡ, ನಾಳೆ ಅಲ್ಲಿ ಅದು ಬೇರೆ ಅಭಿಪ್ರಾಯ ಇದೆ. ಸುಮಾರು 70 ವರ್ಷಗಳಿಂದ ಅಲ್ಲಿಯೇ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಏನೇ ಅಭಿಪ್ರಾಯ ಬಂದರೂ ನೀವು ಅವರಿಗೆ ಜಾಗ ಕೊಡಬೇಕು. ನೀವು ಮನೆ ಕಟ್ಟಿ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಇವತ್ತು ನಿನ್ನೆಯ ಅಭಿಪ್ರಾಯ ಬೇರೆ. ನೀವು ಅವನ್ನು ಡೆಮಾಲಿಷ್ ಮಾಡಿದರೆ.

ಶ್ರೀ ಎಸ್.ಎಸ್. ಪಾಟೀಲ್: ಸರ್ಕಾರಕ್ಕೆ ತೆಗೆದುಕೊಳ್ಳವುದಿದ್ದರೆ ನೀವು ಅವರಿಗೆ ಜಾಗಕೊಡಬೇಕು, ಮನೆ ಕಟ್ಟಿಸಿ ಕೊಡಬೇಕು, ಅವರಿಗೆ ಆ ವ್ಯವಸ್ಥೆ ಮಾಡಿಕೊಡಬೇಕು. ಅಲ್ಲಿ ಮಾಡಿಕೊಟ್ಟರೆ ನೀವು ತೆಗೆದುಕೊಳ್ಳಲಿಕ್ಕೆ ಅಡ್ಡಿಯಿಲ್ಲ, ಇಲ್ಲದೇ ಹೋದರೆ ನೀವು ಸುಮ್ಮನೆ ಹೊರಗೆ ಕಿತ್ತು ಹಾಕಿ ಬಿಟ್ಟರೆ ಅವರಿಗೆ ತೊಂದರೆಯಾಗುತ್ತದೆ. ಅವರಿಗೆ ನೀವು ಏನು ಒಂದು ಅಭಿವೃದ್ಧಿ ಮಾಡುತ್ತಿದ್ದರೆ ಮಾತ್ರ ತೆಗೆದುಕೊಳ್ಳಿ, ಸುಮ್ಮನೆ ಹಾಗೆ ತೆಗೆದುಕೊಂಡು ಖಾಲಿ ಬಿಡುವ ಆಗಿದ್ದರೆ ಅಲ್ಲ, ನಾನು ಹೇಳುವುದು, ಈಗ ಹೇಗೆ ನಮ್ಮ ಬೆಂಗಳೂರನ್ನು ಅಭಿವೃದ್ಧಿ ಮಾಡುತ್ತಿದ್ದಾರೆ ಆ ಟೈಪ್ ಅಭಿವೃದ್ಧಿ ಮಾಡಬೇಕು, ಅಲ್ಲಿ ಏನಾದರೂ ಗಾರ್ಡ್‌ನ್ ಮಾಡಬೇಕು ಎನ್ನುವುದಿದ್ದರೆ, ಅವರನ್ನು ಸ್ಥಳಾಂತರ ಮಾಡಬೇಕು ಎನ್ನುವುದಾದರೆ, ಅದಕ್ಕಿಂತ ಪೂರ್ವದಲ್ಲಿ ಎಲ್ಲಾ ವ್ಯವಸ್ಥೆ ಮಾಡಿ ಬಿಡಿಸಬೇಕೇ ಹೊರತು ಹಾಗೆಯೇ ಬಿಡಿಸಬಾರದು.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಜವಳಿ, ಮೂಲಭೂತ, ಸೌಕರ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ): ಮಾನ್ಯ ಅಧ್ಯಕ್ಷರೆ, ಈ ಮಹಾದೇವ್ ಈ ಮಹಾದೇವ್ ಜವಳಿ ಗಿರಣಿ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಎತ್ತಿದಂಥ ಮಾತು ಸತ್ಯ. ಏಕೆಂದರೆ, ಇದು ನೂರು ವರುಷದ ಹಳೆಯ ಮಿಲ್. ಅದರ ಜಮೀನಿನ ಬಗ್ಗೆ ಅಂದಿನಿಂದ ಇಂದಿನವರೆವಿಗೂ ಸರಿಯಾದ ಮಾಹಿತಿಯೂ ಇರಲಿಲ್ಲ. ಆದರೂ ಕೂಡ ಕಳೆದ ವಿಧಾನ ಸಭಾ ಅಧಿವೇಶನದಲ್ಲಿ ಮಾನ್ಯ ಜಗದೀಶ್ ಶೆಟ್ಟರು, ಮಾನ್ಯ ಗಡ್ಡಿಯವರು, ಮಾನ್ಯ ಜಬ್ಬಾರ್ ಖಾನ್‌ರವರು ಎಲ್ಲಾ ಆ ಹುಬ್ಬಳ್ಳಿ ಭಾಗದ ನಾಯಕರುಗಳ ಸಮ್ಮುಖದಲ್ಲಿ ಅಲ್ಲಿದ್ದಂಥ ಕಾರ್ಮಿಕರಿಗೆ ಸರ್ಕಾರ 5.3 ಕೋಟಿ ರೂಪಾಯಿಗಳನ್ನು ಕೊಟ್ಟು ಅವರಿಗೆ ಮಿಲ್‌ನಿಂದ ಹೊರಗೆ ಹೋಗುವುದಕ್ಕೆ ಮತ್ತು ಅವರ ಮನೆಗಳನ್ನು, ಏನು ಜಾಗಗಳು ಇತ್ತೋ ಅದನ್ನು ಬಿಡಿಸುವುದಕ್ಕೆ ನಾವು ಪ್ರಯತ್ನ ಮಾಡಿದೆವು. ಆ ಸಮಯದಲ್ಲಿ ಏನು ಈ ಗಿರಿಣಿ ಚಾಳ್‌ನಲ್ಲಿ ಇದ್ದಂಥ 72 ಜನಗಳದ್ದು ಕೊನೆಗೆ ಬಹಳಷ್ಟು ಸಮಯ ಹಿಡಿಯಿತು. ಆ ಸಂದರ್ಭದಲ್ಲಿ ನಾವು ಅದರ ಕಡತವನ್ನು ನೋಡಿದಾಗ, ಮಾಹಿತಿಯನ್ನು ನೋಡಿದಾಗ, ಆ ಗಿರಣಿ ಚಾಳ್ ಅದಕ್ಕಾಗಿ ಸ್ಲಂ ಬೋರ್ಡಿನ ರೀತಿಯಲ್ಲಿ ಅವರಿಗೆ ನೀರು, ವಸತಿ, ವಿದ್ಯುದ್ದೀಪ, ಎಲ್ಲವನ್ನೂ ಈಗಾಗಲೇ ಸರ್ಕಾರ ಅವರಿಗೆ ಕೊಟ್ಟಿದ್ದೆ, ಆ ಜಾಗದಲ್ಲಿ ಇರತಕ್ಕಂಥವರಿಗೆ. ಜೊತೆಗೆ ಈಗ ಬಂದಿರತಕ್ಕಂಥ ತೊಂದರೆ ಏನೆಂದರೆ, ಭೂ ಒಡೆತನದ ಬಗ್ಗೆ ಬಂದಿದೆ. ಅದರಲ್ಲಿ ನಾವು ಸರ್ಕಾರ ಭೂ ಒಡೆತನದ ಡಿಸ್‌ಪ್ಯೂಟ್ ಇರುವುದಕ್ಕಾಗಿ ನಾಲ್ಕು ಲಕ್ಷ ರೂ. ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದೇವೆ. ಅದು ಒಂದು ಭಾಗದ ಜಮೀನಿನ ವಿವಾದಕ್ಕೆ ಒಳಪಟ್ಟಿರುವುದು. ಇನ್ನು ಉಳಿದಿರತಕ್ಕಂಥದ್ದು ಸರ್ಕಾರ ಏನು ಆರು ಕೋಟಿ ಮೂವತ್ತು ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಅದಕ್ಕಾಗಿ ಆ ಜಮೀನನ್ನು ಮತ್ತು ಇಡೀ ಮಿಲ್ ಅನ್ನು ವಿಲೇವಾರಿ ಮಾಡತಕ್ಕಂಥದ್ದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ಹೋದಂಥ ಸಂದರ್ಭದಲ್ಲಿ ಭೂ ಒಡೆತನದ ಪ್ರಶ್ನೆ ಬಂದಿರುವುದರಿಂದ, ಇದಕ್ಕೆ ಸರ್ಕಾರದ ವಕೀಲರು ಹೋಗಿದ್ದಾರೆ, ಮಂಡನೆ ಮಾಡಿದ್ದಾರೆ, ಎಲ್ಲಾ ಆಗಿದೆ. ಆದರೆ ಡಾಕ್ಯುಮೆಂಟ್‌ನಲ್ಲಿ, ನೂರು ವರ್ಷಗಳ ಹಿಂದಿನ ಡಾಕ್ಯುಮೆಂಟ್

ಹಳೆಯ ಡಾಕ್ಯುಮೆಂಟ್ಸ್ ಆಗಿರುವುದರಿಂದ, ಬ್ರಿಟಿಷರ ಕಾಲದಿಂದ ಬಂದಂಥ ಡಾಕ್ಯುಮೆಂಟ್ಸ್ ಆಗಿರುವುದರಿಂದ, ಸರಿಯಾದ ಡಾಕ್ಯುಮೆಂಟ್ಸ್ ಇಲ್ಲ ಎನ್ನತಕ್ಕಂಥದ್ದಕ್ಕೆ ಅವರು ನಮಗೆ ಮತ್ತೆ ನೋಟಿಸ್ ಕೊಟ್ಟಿರುವುದರಿಂದ, ಭೂ ಒಡೆತನವನ್ನು ಧೃಡಪಡಿಸಿ ಎನ್ನುವ ಬೇಡಿಕೆಯಿರುವುದರಿಂದ, ಅದನ್ನು ಧೃಡಪಡಿಸುತ್ತಿದ್ದೇವೆಯೇ ಹೊರತು ಮೂಲಭೂತವಾಗಿ ಇವತ್ತು ಆ ಸುಶೀಲಮ್ಮನಿಗೆ ಜಮೀನು ಕೊಡುವುದು ಬಿಡುವುದು ನಮ್ಮ ಕರ್ತವ್ಯ ಅಲ್ಲ. ಅದು ಅವರ ಒಡೆತನದ ಬಗ್ಗೆ ಮತ್ತೆ ಕೆಲಸ ನಡೆಯುತ್ತದೆ. ಈಗ ನಾವು ಜಮೀನು ನಮ್ಮದು ಎನ್ನತಕ್ಕಂಥದ್ದಗೋಸ್ಕರ ಈ ಅಮೆಂಡ್‌ಮೆಂಟ್ ಬೇಕಾಗಿದೆ, ಗಿರಣಿ ಚಾಳ್‌ನವರ ಬಗ್ಗೆ ತಾವೇನು ಅನಿಸಿಕೆಗಳನ್ನು ಹೇಳಿದಿರಿ, ನಾವು ಈಗಾಗಲೇ ಸ್ಪಂದಿಸಿ ಅವರಿಗೆ ದುಡ್ಡು ಕೊಡಲಿಕ್ಕೆ ಆಗದೇ ಇರುವ ಸಂದರ್ಭದಲ್ಲಿ, ಒಡೆತನದ ಬಗ್ಗೆ ಕೂಡ ಇತ್ತು. ಆದರೂ ಕೂಡ ಸರ್ಕಾರ ಬಡವರ ಬಗ್ಗೆ ಕಾಳಜಿ ವಹಿಸಿ ಅದರಲ್ಲಿ 72 ಜನ ಕಾರ್ಮಿಕರು ಇದ್ದಂಥವರಿಗೆ ಅವರನ್ನು ಬಿಡಿಸುವುದಕ್ಕೋಸ್ಕರ ಹಣ ಕೊಟ್ಟಿರುವಂಥದ್ದು, ತಾವು ಕೂಡ ಆ ಸಭೆಯಲ್ಲಿ ಬಂದಿದ್ದೀರಿ, ಮಾನ್ಯ ಜಬ್ಬಾರ್ ಖಾನ್‌ರವರು ಬಂದಿದ್ದರು ಹಾಗೂ ನಮ್ಮ ಮಾನ್ಯ ಗಡ್ಡಿಯವರೂ ಕೂಡ ಇದ್ದರು, ಎಲ್ಲರೂ ಕೂಡ ಸೇರಿ ಆ ಭಾಗದ ಜನಪ್ರತಿನಿಧಿಗಳ ಮೂಲಕ ಅದು ಆಗಿದೆ. ಆದುದರಿಂದ, ಈ ಒಂದು ತಿದ್ದುಪಡಿಗೆ ಅಂಗೀಕಾರವನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಈಗ ನಾನು ಏನು ಹೇಳಿದೆ, ಬಿಡಿಸುವುದು ಆಗುವುದಿಲ್ಲವೆಂದು ಹೇಳಿದಿರಿ, ಬಿಡಿಸುವುದು ಬೇಡ, ಈಗ ಅಲ್ಲಿ ಹನ್ನೆರಡು ಎಕರೆ ಜಮೀನು ಏನು ಇದೆ ಅಲ್ಲಿ ಸುಮಾರು 70 ವರ್ಷಗಳಿಂದ ವಾಸವಾಗಿದ್ದಾರೆ. ಅವರನ್ನು ಬಿಡಿಸುವಂಥ ಪ್ರಶ್ನೆನೇ ಇಲ್ಲ. 72 ಜನರದ್ದು ಏನು ಡಿಸ್‌ಪ್ಯೂಟ್ ಇತ್ತಲ್ಲಾ ಅದರ ಬಗ್ಗೆ ನೂ ಒಂದು ಪರಿಹಾರ ಹುಡಿಕಿದಿರಿ. ಆದರೆ ಏನಾಗಿದೆ ಎಂದರೆ ಅವರಿಗೆ ಇವತ್ತಿಗೂ ಇನ್‌ಸೆಕ್ಯೂರಿಟಿ ಇದೆ. ಅಲ್ಲಿ ಏನು ವಾಸವಾಗಿದ್ದಾರೆ ಅವರಿಗೊಂದು ಸಣ್ಣ ಕಾಗದ ಕೂಡ ಅವರ ಕೈಯಲ್ಲಿ ಇಲ್ಲ. ಅವರ ಆ ಮನೆಯ ಮಾಲೀಕರು, ಜಾಗದ ಮಾಲೀಕರು ಎನ್ನುವುದರ ಬಗ್ಗೆ ಏನೂ ಒಂದು ಹಕ್ಕುಪತ್ರ ಇಲ್ಲ. ಇವತ್ತು ನಾವು ಬಡವರಿಗೆ ಆಶ್ರಯ ಮನೆಗಳನ್ನು ಹಂಚುತ್ತೇವೆ, ಆಶ್ರಯ ಮನೆಗಳನ್ನು ಹಂಚಿದ ಮೇಲೆ ನಾವು ಅವರಿಗೆ ಒಂದು ಹಕ್ಕುಪತ್ರ ಕೊಡುತ್ತೇವೆ. ಆದರೆ ಇವತ್ತು ಆ ಗಿರಣಿಚಾಳ್‌ದಲ್ಲಿ ಇರತಕ್ಕಂಥ ನೂರಾರು ಜನರಿಗೆ ಇವತ್ತಿಗೂ ಅವರ ಕೈಯಲ್ಲಿ ಒಂದು ಹಕ್ಕುಪತ್ರವಿಲ್ಲ. ಆದುದರಿಂದ ಅದರ ಬಗ್ಗೆ ಸರ್ಕಾರ ಇವತ್ತು ಸ್ಪಷ್ಟವಾದಂಥ ನಿಲುವು ತೆಗೆದುಕೊಳ್ಳಬೇಕು. ನಾವು ಅವರಿಗೆ ಹಕ್ಕುಪತ್ರ ಕೊಡುವ ಬಗ್ಗೆ ವಿಚಾರ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ನೀವು ಕೊಟ್ಟರೆ, ನಾಳೆ ಅಲ್ಲಿ ಇರುವಂಥವರಿಗೆ ಒಂದು ಸೆಕ್ಯೂರಿಟಿ ಸಿಕ್ಕುತ್ತದೆ. ಅದರ ಬಗ್ಗೆ ಚಿಂತನೆ ಮಾಡಬೇಕು, ಅದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

12.30 ಪಿಎಂ

ಶ್ರೀ ಹೊನ್ನಾಳಿ ಜಬ್ಬರ್‌ಖಾನ್ ಹಯಾತ್ ಖಾನ್(ಹುಬ್ಬಳ್ಳಿ): ಮಾನ್ಯ ಅಧ್ಯಕ್ಷರೆ, ಸುಮಾರು 100 ವರ್ಷಗಳ ಹಿಂದಿನಿಂದ ಅಲ್ಲಿನ ಜನರು ಸದರಿ ಜಾಗದಲ್ಲಿ ವಾಸಮಾಡುತ್ತಿದ್ದಾರೆ. ಈಗಾಗಲೇ ಅಲ್ಲಿ ನಿರ್ಮಾಣ ಮಾಡಿರತಕ್ಕಂಥ ಕಟ್ಟಡಗಳು ಅಲ್ಲಿರತಕ್ಕಂಥ ಜನರ ಸ್ವಂತದ್ದು. ಇವತ್ತಿನ ದಿವಸ ಎಸ್‌ಸಿ:ಎಸ್‌ಟಿ ಮತ್ತು ಅಲ್ಪಸಂಖ್ಯಾತ ವರ್ಗದ ಜನರು ಅಲ್ಲಿ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ. ಅಲ್ಲಿರತಕ್ಕಂಥ ಜನರು ಸುಮಾರು ನೂರಾರು ವರ್ಷಗಳಿಂದ ಅಲ್ಲಿ ವಾಸಮಾಡುತ್ತಿರುವುದರಿಂದ ನೀವು ಯಾವ ಒಂದು ಕಾನೂನಿನ ಪ್ರಕಾರ ಅವರನ್ನು ಅಲ್ಲಿಂದ ಬಿಡುಸುತ್ತೀರಿ ಎನ್ನತಕ್ಕಂಥದ್ದು

ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಅಲ್ಲಿರತಕ್ಕಂಥ ಜಾಗ ಮತ್ತು ಅವರು ಮನೆಗೆ ವಿದ್ಯುತ್ ಕನೆಕ್ಷನ್ ತೆಗೆದುಕೊಂಡಿರತಕ್ಕಂಥದ್ದು ಅವರ ಹೆಸರಿನಲ್ಲಿ ಇದೆ. ಇದ್ಯಾವುದು ಸರ್ಕಾರದ ಹೆಸರಿನಲ್ಲಿ ಇಲ್ಲ. ತಮ್ಮ ಸ್ವಂತ ಖರ್ಚಿನಲ್ಲೇ ಅವರು ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡಿದ್ದಾರೆ. ಆದರೆ, ಅಲ್ಲಿರತಕ್ಕಂಥ ಟೆಕ್ಸ್‌ಟೈಲ್ ಮಿಲ್‌ನ ಜಾಗವನ್ನು ತೆಗೆದುಕೊಳ್ಳಿ. ಮತ್ತೆ ಅಲ್ಲಿ ವಾಸ ಮಾಡತಕ್ಕಂಥ ಜನರಿಗೆ ಸವಲತ್ತುಗಳನ್ನು ಮಾಡಿಕೊಡಬೇಕಾಗುತ್ತದೆ. ನೂರಾರು ವರ್ಷಗಳಿಂದ ಅಲ್ಲಿ ವಾಸ ಮಾಡತಕ್ಕಂಥವರಿಗೆ ನಾವು ಮಾಲೀಕತ್ವವನ್ನು ಕೊಡುವುದಿಲ್ಲವೆಂದರೆ ಇದು ಬಹಳ ಅನ್ಯಾಯವಾಗುತ್ತದೆ. ಆ ಜನರಿಗೆ ನಾವು ಸಹಾಯ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎಂ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ವಿಷಯ ಬರುತ್ತದೆ. ಗಿರಣಿ ಚಾಳ್ ವಿಷಯ ಬರುತ್ತದೆ ಮತ್ತೆ ಸುಶೀಲಮ್ಮ ಮಾಡುತ್ತಿರುವ ಜಮೀನಿನ ವಿಷಯ ಇದೆ. ಎರಡು ವಿಷಯಗಳು ಬೇರೆ ಬೇರೆಯಾಗಿವೆ. ಗಿರಣಿ ಚಾಳ್ ಇರತಕ್ಕಂಥ ಜಾಗ ಎಂ.ಟಿ.ಎಂ. ಮಿಲ್‌ಗೆ ಸೇರಿರತಕ್ಕಂಥದೆಂದು ರೆಕಾರ್ಡ್ಸ್‌ನಲ್ಲಿದೆ. ಭೂ ಒಡೆತನಕ್ಕೆ ಸಂಬಂಧಪಟ್ಟಂತೆ ಸುಶೀಲಮ್ಮ ಎಂಬುವರು 1986ರಲ್ಲಿ ಕೋರ್ಟ್‌ಗೆ ಹೋದಾಗ ಆಕೆಗೆ ಇದು ಸಂಬಂಧಪಡುತ್ತದೆ ಎಂದು ತೀರ್ಮಾನ ಬರುತ್ತದೆ ಎಂದು ಭೂ ಒಡೆತನದ ಬಗ್ಗೆ ಈ ಒಂದು ಪ್ರಾವಿಜನ್‌ನ್ನು ತಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಚಿವರು ಹೇಳಿದ ಪ್ರಕಾರ ಎರಡು ವಿಷಯಗಳು ಬೇರೆಯಾಗಿವೆ. ಆದರೆ, ಅಲ್ಲಿರತಕ್ಕಂಥ ಜನರಿಗೆ ರಕ್ಷಣೆ ಕೊಡುತ್ತೇವೆ ಎಂದು ಸರ್ಕಾರ ಭರವಸೆ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಅಲ್ಲಿರತಕ್ಕಂಥ ಜಾಗ ಏನಾಗಿದೆ ಎಂದರೆ....

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಜಮೀನು ಸರ್ಕಾರದ್ದು ಎಂದು ನೀವು ವಾದ ಮಾಡುತ್ತಿದ್ದೀರಿ. ಆದರೆ, ಸುಶೀಲಮ್ಮನವರು ಈಗ ಆ ಜಾಗ ನಮ್ಮದು ಹೇಳುತ್ತಾ ಇದರಲ್ಲಿ ನಾವು ಏನು ಬೇಕಾದರೂ ಪರಭಾರೆ ಮಾಡುತ್ತೇವೆಂದು ಅವರು ಕೋರ್ಟ್‌ಗೆ ಹೋಗಿದ್ದಾರೆ. ಆದರೆ, ಇದು ಸರ್ಕಾರದ ಮಾಲೀಕತ್ವದಲ್ಲಿದೆ ಎಂದು ನೀವು ಹೇಳುತ್ತಿದ್ದೀರಿ. ಈ ರೀತಿಯೇ ನೀವು ಡಿಫೈಂಡ್ ಮಾಡಿಕೊಂಡು ಸದರಿ ಜಾಗವನ್ನು ಸರ್ಕಾರವೇ ಉಳಿಸಿಕೊಳ್ಳಲಿ. ಆದರೆ, ಇದರ ಜೊತೆಗೆ ಅಲ್ಲಿ ಒತ್ತುವರಿ ಮಾಡಿಕೊಂಡಿರತಕ್ಕಂಥ ನೂರಾರು ಕುಟುಂಬದ ಸಾವಿರಾರು ಜನರಿಗೆ ರಕ್ಷಣೆ ಕೊಡುವುದರ ಜೊತೆಗೆ ಅವರಿಗೆ ನಾಳೆದಿವಸ ಹಕ್ಕುಪತ್ರವನ್ನು ಕೊಡುವಂಥ ವಿಚಾರ ಮಾಡುತ್ತೇವೆ ಎಂಬುದು ಸರ್ಕಾರದ ಕಡೆಯಿಂದ ಭರವಸೆ ಬರಲಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಹೆಚ್.ಎಂ. ರೇವಣ್ಣ: ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಅಲ್ಲಿನ ಪೂರ್ಣ ಪ್ರಮಾಣದ ಮಾಹಿತಿ ಗೊತ್ತು. ಏಕೆಂದರೆ ಸುಮಾರು 100 ವರ್ಷಗಳ ಹಿಂದೆ ಪ್ರಾರಂಭವಾದಂಥ ಈ ಮಿಲ್‌ನಲ್ಲಿ ಅನೇಕ ರೀತಿಯ ಬದಲಾವಣೆಯಾಗಿರುವುದಲ್ಲದೆ ಡಾಕ್ಯುಮೆಂಟ್‌ಗಳ ವ್ಯತ್ಯಾಸ ಕೂಡ ಆಗಿದೆ. ಕೊನೆಯ ಹಂತದಲ್ಲಿ ಲಾಸ್ ಆಗಿರತಕ್ಕಂಥದ್ದನ್ನು ಸರ್ಕಾರ ಈಗಾಗಲೇ ಭರಿಸಿಕೊಟ್ಟಿದೆ. ಮತ್ತೆ ಇದು ಬಿ.ಐ.ಎಫ್.ಆರ್ ಮುಂದೆ ಕೂಡ ಹೋಗಿತ್ತು. ಇದನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಸರ್ಕಾರ ಅವರಿಗೆ ಹಣವನ್ನೂ ಕೂಡ ಕೊಟ್ಟಿದೆ. ಅಲ್ಲಿರತಕ್ಕಂಥ ಜಮೀನಿನ ಭೂ ಒಡೆತನದ ಬಗ್ಗೆ ಮೂರು ಪಾರ್ಟ್ ಇದೆ ಎಂದು ನಾನೂ ಈಗಾಗಲೇ ಹೇಳಿದ್ದೇನೆ. ಆದರೆ, ಈ ಜಾಗ ಸುಶೀಲಮ್ಮ ಎಂಬುವರಿಗೆ ಲೀಜ್ ಆಗಿದೆ ಎಂದು ಹೇಳುವುದರಿಂದ ಇದು ಸರ್ಕಾರದ ಜಮೀನು ಎಂದು ಪ್ರತಿಪಾದನೆ ಮಾಡುವ

ಉದ್ದೇಶದಿಂದ ಈ ಒಂದು ಬಿಲ್‌ನ್ನು ತಂದಿದ್ದೇವೆ. ಮತ್ತೆ ಇದಕ್ಕೆ ಸಂಬಂಧಪಡುವಂಥ ಬೇರೆ ವಿಷಯಗಳನ್ನು ಬೇರೆ ಸಂದರ್ಭದಲ್ಲಿ ಚರ್ಚಿಸೋಣ. ಈಗ ಈ ಬಿಲ್‌ನ್ನು ಅಂಗೀಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 9ರವರೆಗೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:– "ಖಂಡ 2 ರಿಂದ 9ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಮೂಲಭೂತ ಸೌಲಭ್ಯ ಹಾಗೂ ನಾಗರೀಕ ವಿಮಾನಯಾನ ಸಚಿವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

V ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

†**ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):** ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇವತ್ತಿನದಿವಸ ನಮೆಲ್ಲರಿಗೂ ಗೊತ್ತಿರುವ ಹಾಗೆ ಮೇಲ್ಮನೆ ಹಾಗೂ ಕೆಳಮನೆಗಳಲ್ಲಿ ಬಾಲ್ಯ ವಿವಾಹ ಪದ್ದತಿ ಇದೆ. ಹಾಗೆಯೇ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಾಮೂಹಿಕ ಮದುವೆ ಮಾಡುವಾಗ ಸಣ್ಣ ಮಕ್ಕಳಿಗೆ ಮದುವೆ ಮಾಡುತ್ತಿರುವುದು ಕಂಡು ಬಂದಿದೆ. ಮತ್ತೆ ಈ ಸಮಾರಂಭಗಳಲ್ಲಿ ಹಲವಾರು ಜನ ಮಂತ್ರಿಗಳು ಮತ್ತು ಶಾಸಕರು ಭಾಗವಹಿಸಿದ್ದರು ಎನ್ನತಕ್ಕಂಥ ಆಪಾದನೆ ಬಂದಿದೆ. ಕೇಂದ್ರ ಸರ್ಕಾರದ 1929ನೇ ಅಧಿನಿಯಮ 19ರಲ್ಲಿ ಪ್ರತಿಬಂಧಕ ಶಿಶು ವಿವಾಹ ಕಾಯಿದೆ ಇದ್ದರೂ ಕೂಡ ಇದನ್ನು ಸರಿಯಾಗಿ ಕಂಟ್ರೋಲ್ ಮಾಡತಕ್ಕಂಥ; ಒಬ್ಬ ಆಫೀಸರ್ ಇರಲಿಲ್ಲ. ಆದ್ದರಿಂದ ಇದಕ್ಕಾಗಿ ಒಬ್ಬ ಆಫೀಸರ್‌ನ್ನು ನೇಮಕ ಮಾಡುವ ಮೂಲಕ ಎಲ್ಲೆಲ್ಲಿ ಸಾಮೂಹಿಕ ಮದುವೆಯಲ್ಲಿ ಶಿಶುವಿವಾಹ ನಡೆಸತಕ್ಕಂಥದ್ದನ್ನು ಪತ್ತೆ ಹಚ್ಚುವುದು ಮತ್ತು ಅದನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದೇ ಈ ಒಂದು ಶಿಶುವಿವಾಹ ಪ್ರತಿಬಂಧಕದ ತಿದ್ದುಪಡಿಯ ಉದ್ದೇಶವಾಗಿದೆ. ಇದಕ್ಕೆ ಹೊಸದಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತಿಲ್ಲ. ನಮ್ಮ ಇಲಾಖೆಯಲ್ಲಿರತಕ್ಕಂಥ ಒಬ್ಬ ಅಧಿಕಾರಿಗೆ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟು ಸಾಮೂಹಿಕ ಮದುವೆ ಎಲ್ಲಿಯಾದರೂ ಆದರೆ ಅಂಥ ಸಂದರ್ಭದಲ್ಲಿ ಈ ವ್ಯಕ್ತಿ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಬೇಕೆಂದು ಮತ್ತು ಈ ಅಧಿಕಾರಿಯ ಗಮನಕ್ಕೆ ತಂದು ಸಾಮೂಹಿಕ ಮದುವೆಗಳು ನಡೆಯಬೇಕು. ಮತ್ತೆ ಇದರ ಜೊತೆಗೆ ಅಧಿಕಾರೇತರ ಸಲಹಾ ಮಂಡಳಿಯನ್ನು ರಚನೆ ಮಾಡುತ್ತಿದ್ದೇವೆ. ಹಾಗೆಯೇ, ಇದರಲ್ಲಿ ಕನಿಷ್ಟ ಇಬ್ಬರು ಮಹಿಳಾ ಕಾರ್ಯಕರ್ತರು ಇರಬೇಕೆಂಬ ನಿಯಮವನ್ನು ಕೂಡ ಮಾಡಿದ್ದೇವೆ. ಇದರಿಂದ ಎಲ್ಲೆಲ್ಲಿ ಸಾಮೂಹಿಕ ಮದುವೆ ಮಾಡುವಂಥ ಕಡೆ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳಿಗೆ ಮದುವೆ ಮಾಡುವಂಥದ್ದನ್ನು ತಡೆಯುವುದಕ್ಕೆ ಸಹಾಯವಾಗುತ್ತದೆ ಎನ್ನತಕ್ಕಂಥದ್ದೇ ಇದರ ಮೂಲ ಉದ್ದೇಶ. ಆದ್ದರಿಂದ ನಮ್ಮ ಈ ಒಂದು ಮಸೂದೆಯನ್ನು ತಾವು ಅಂಗೀಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಸಾಮೂಹಿಕ ಮದುವೆ ಮಾಡುವಂಥ ಕಡೆ ಚಿಕ್ಕ ಮಕ್ಕಳಿಗೆ ಮದುವೆ ಮಾಡುವುದನ್ನು ತಡೆಯುವುದಕ್ಕೋಸ್ಕರ ಎಂದು ತಾವು ಹೇಳುತ್ತಿದ್ದೀರಿ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಸಿಂಗಲ್ ಮ್ಯಾರೇಜ್ ಮಾಡುವ ಕಡೆ ಚಿಕ್ಕಮಕ್ಕಳಿಗೆ ಮದುವೆ ಮಾಡಬಹುದೆ?

ಶ್ರೀಮತಿ ಮೋಟಮ್ಮ: ಅದೂ ಕೂಡ ಸಾಧ್ಯವಿಲ್ಲ. ಇದು ಹೆಚ್ಚಾಗಿ ಸಾಮೂಹಿಕ ಮದುವೆಯಲ್ಲಿ ಕಂಡು ಬಂದಿದೆ. ಒಟ್ಟಾರೆಯಾಗಿ ಹೇಳುವುದಾದರೆ, 18 ವರ್ಷಕ್ಕಿಂತ ಕೆಳಗಿನ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಸಂಬಂಧಪಟ್ಟಿದೆ.

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.